ಕಲ್ಪಿಸಲಾಗಿದೆ ಎಂದು ಹೇಳಿದ್ದೀರಿ, ಗಣಿ ಗುತ್ತಿಗೆಯನ್ನು ಯಾರು ತೆಗೆದುಕೊಂಡಿದ್ದಾರೋ ಅದರಲ್ಲಿ ೯೦ ಭಾಗದ ಜನ ಕರ್ನಾಟಕದವರಲ್ಲ. ಬೇರೆಯವರು ಗಣಿ ಗುತ್ತಿಗೆ ತೆಗೆದುಕೊಂಡು ಕರ್ನಾಟಕದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಆದ್ದರಿಂದಲೇ ನಾನು ಕನ್ನಡಿಗರು ಎಷ್ಟು ಜನರು ಗುತ್ತಿಗೆಗೆ ತೆಗೆದುಕೊಂಡಿದ್ದಾರೆ ಎಂದು ಪ್ರಶ್ನೆ ಕೇಳಿದ್ದೇನೆ. ಇದನ್ನು ಪುನರ್ ಪರಿಶೀಲನೆ ಮಾಡಿ ಕನ್ನಡಿಗರಿಗೆ ಗಣಿ ಗುತ್ತಿಗೆಯನ್ನು ನೀಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಅಧಿಕಾರಿಗಳಿಗೆ ಹೇಳಿದರೆ ಅವರು ಕೊಡುವುದಿಲ್ಲ. ಆದ್ದರಿಂದ ತಾವು ಕನ್ನಡಿಗರಿಗೇ ಆಧ್ಯತೆಯನ್ನು ನೀಡುವುದರ ಬಗ್ಗೆ ಕಾನೂನಿನ ಚೌಕಟ್ಟಿನಲ್ಲೇ ಅವಕಾಶ ಮಾಡಿಕೊಡುತ್ತೀರಾ ಮತ್ತು ಈಗ ಕೊಟ್ಟಿರುವ ಇಡೀ ಗುತ್ತಿಗೆಯನ್ನು ಪುನರ್ ಪರಿಶೀಲನೆ ಮಾಡಿ ಕನ್ನಡಿಗರಿಗೆ ಆಧ್ಯತೆ ಕೊಡಬೇಕು ಎಂಬ ಆದೇಶವನ್ನು ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಪ್ರಿಲಿಮಿನರಿ ಲೀಸ್‌ಗೆ ಲೈಸೆನ್ಸ್ ತೆಗೆದುಕೊಂಡು ಲಕ್ಷಾಂತರ ರೂಪಾಯಿ ಮಿನರಲ್ಸ್ ಹೊಡೆಯುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಜಕ್ಕನಕೋಟೆಯಲ್ಲಿ ಪ್ರಿಲಿಮಿನರಿ ಲೀಸ್ ತೆಗೆದುಕೊಂಡು ಲಕ್ಷಾಂತರ ರೂಪಾಯಿ ಬೆಲೆ ಬಾಳುವಂಥ ಸಂಪತ್ತನ್ನು ಲೂಟಿ ಹೊಡೆಯುತ್ತಿದ್ದಾರೆ. ಈ ಬಗ್ಗೆ ನಾನು ಪತ್ರವನ್ನೂ ಬರೆದಿದ್ದೇನೆ. ಇದರಲ್ಲಿ ಇಲಾಖೆಯವರು ಮತ್ತು ಪೋಲೀಸಿನವರು ಶಾಮೀಲಾಗಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಗುಂಡೂರಾವ್.—ನನ್ನ ಗಮನಕ್ಕೆ ಅಂಥ ಪ್ರಕರಣಗಳು ನಡೆದಿರುವುದನ್ನು ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

Taking over the maintenance of water supply of Chamarajanagar Town.

255. SRI M. C. BASAPPA (Chamarajanagar) —Will the Minister for Housing and Urban Development be pleased to state.—

(a) whether their is any proposal before Karnataka Urban Water Supply and Drainage Board to take over the maintenance of water supply of Chamarajanagar Town ;

(b) if so, when they propose to take over ;

(c) whether an improvement estimate is prepared and pending before the Government for sanction to improve water supply to Chamarajanagar Town?

SRI DHARM SINGH (Minister for Housing and Urban Development).—

(a) Yes.

(b) The Board will take over maintenance provided the T.M.C. deposits maintenance charges of Rs. 5 lakhs as intimated by the Board in letter No. 12779, dated 30-3-1979. So far TMC authorities have not deposited the maintenance charges.

(c) The Karnataka Urban Water Supply and Drainage Board have prepared estimate for improving the water supply amounting to Rs. 50.00 lakhs, under LIC Loan assistance scheme. It is under the active consideration of the Government for according administrative approval.

ಶ್ರೀ ಎಂ.ಸಿ. ಬಸಪ್ಪ.—ಸ್ವಾಮಿ, ಚಾಮರಾಜನಗರ ಟೌನಿನಲ್ಲಿ ನೀರು ಸರಬರಾಜು ಯೋಜನೆಯನ್ನು ಜಲಮಂಡಲಿಯವರು ತೆಗೆದುಕೊಳ್ಳಬೇಕೆಂದು ಯಾವಾಗ ಆಜ್ಞೆ ಮಾಡಿತು ?

† ಶ್ರೀ ಧರ್ಮಸಿಂಗ್.—ಚಾಮರಾಜನಗರ ನೀರುಸರಬರಾಜು ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ೧-೪-೧೯೭೯ರಲ್ಲಿ ಜಲಮಂಡಲಿಯವರಿಗೆ ಸರ್ಕಾರದವರು ಆದೇಶವನ್ನು ಕೊಟ್ಟಿದ್ದರು. ಇದಕ್ಕೆ ೫ ಲಕ್ಷ ರೂಪಾಯಿಯನ್ನು ತುಂಬಬೇಕೆಂದು ಜಲಮಂಡಳಿಯವರು ಮುನಿಸಿಪಾಲಿಟಿಯವರಿಗೆ ತಿಳಿಸಿದ್ದು ಮುನಿಸಿಪಾಲಿಟಿಯವರು ಅಷ್ಟು ಹಣ ಕೊಡುವುದು ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಯೋಜನೆಯನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಎಂ.ಸಿ. ಬಸಪ್ಪ.—ಜಲಮಂಡಲಿಯವರು ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೊರಡಿಸಿದ್ದ ಸರ್ಕಾರೀ ಆಜ್ಞೆಯಲ್ಲಿ ಮುನಿಸಿಪಾಲಿಟಿಯವರು ಇಷ್ಟು ಹಣ ಕಟ್ಟಬೇಕು ಎಂದು ನಿರ್ದೇಶನ ನೀಡಲಾಗಿತ್ತೆ ?

ಶ್ರೀ ಧರ್ಮಸಿಂಗ್. —೧೯೭೯ರಲ್ಲಿ ಮತ್ತು ಅದಾದಮೇಲೆ ಎರಡು ಮೂರು ಸಲ ೫ ಲಕ್ಷ ರೂಪಾಯಿ ಹಣ ಕಟ್ಟಬೇಕೆಂದು ಆದೇಶ ಕೊಡಲಾಗಿತ್ತು. ಆದರೂ ಕೂಡ ಅದಕ್ಕೆ ಅವರು ಉತ್ತರ ಕೊಟ್ಟಿರಲಿಲ್ಲ. ನಂತರ ಅವರು ಅಷ್ಟು ಹಣ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ.ಸಿ. ಬಸಪ್ಪ.—ಚಿಂತಾಮಣಿ ಮತ್ತು ಚಾಮರಾಜನಗರ ಟೌನಿನ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳಬೇಕು ಒಂದು ಸರ್ಕಾರೀ ಆಜ್ಞೆ ಹೊರಡಿಸಿದ್ದೀರಿ. ೧-೪-೧೯೭೯ ರಂದು ನೀರು ಸರಬರಾಜು ಯೋಜನೆಯನ್ನು ಜಲಮಂಡಲಿಯವರು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದೆ. ಅದರಲ್ಲಿ ಯಾವ ಷರತ್ತನ್ನೂ ಹಾಕಿಲ್ಲ. ಆದರೆ ಜಲಮಂಡಲಿಯವರು ಒಂದು ಎಸ್ಟಿಮೇಟನ್ನು ತಯಾರು ಮಾಡಿ ೫-೧೦ ಲಕ್ಷ ರೂಪಾಯಿ ಕೊಡಿ ಎಂದು ಕೇಳಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿದ್ದೀರಾ ? ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಧರ್ಮಸಿಂಗ್.—ಜಲಮಂಡಲಿಯವರು ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದರೂ ಕೂಡ ಅವರು ತೆಗೆದುಕೊಳ್ಳಬೇಕಾದರೆ ಎಷ್ಟು ವೆಚ್ಚವಾಗುತ್ತದೆ. ಎಂಬುದನ್ನು ನೋಡಿ ೫ ಲಕ್ಷ ರೂಪಾಯಿ ಬೇಕು ಎಂದೂ ಅವರು ಕೇಳಿದ್ದಾರೆ. ಮುನಿಸಿಪಾಲಿಟಿಯವರು ಹಣ ಕಟ್ಟಬೇಕಾಗುತ್ತದೆ. ಎಲ್ಲೆಲ್ಲಿ ನೀರು ಸರಬರಾಜು ಯೋಜನೆಯನ್ನು ಜಲಮಂಡಲಿಯವರು ತೆಗೆದುಕೊಳ್ಳುತ್ತಾರೋ ಅಲ್ಲೆಲ್ಲಾ ಮುನಿಸಿಪಾಲಿಟಿಯವರು ಹಣ ಕೊಡಬೇಕೆಂದು ಕೇಳಿದ್ದಾರೆ.

ಶ್ರೀ ಎಂ.ಸಿ. ಬಸಪ್ಪ.—ಲೋಕೋಪಯೋಗಿ ಇಲಾಖೆಯವರು ಎರಡೂವರೆ ಲಕ್ಷ ರೂಪಾಯಿಯನ್ನು ಕೊಟ್ಟು ನೀರು ಸರಬರಾಜು ವ್ಯವಸ್ಥೆಯನ್ನು ಮೈಂಟೇನ್ ಮಾಡುತ್ತಾರೆ. ಜಲಮಂಡಲಿಯವರು ಮುನಿಸಿಪಾಲಿಟಿಯವರಿಗೆ ೫ ಲಕ್ಷ ರೂಪಾಯಿ ಕೊಡಿ ಎಂದು ಕೇಳುತ್ತಿರುವುದಕ್ಕೆ ಇರುವ ಆಧಾರವೇನು ?

ಶ್ರೀ ಧರ್ಮಸಿಂಗ್.—ಈ ಯೋಜನೆಯನ್ನು ತೆಗೆದುಕೊಂಡಿದ್ದು ೧೬ ವರ್ಷದ ಹಿಂದೆ ಈಗ ಲೋಕೋಪಯೋಗಿ ಇಲಾಖೆಯವರು ಕೂಡ ಎರಡೂವರೆ ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆದರೂ ಎಷ್ಟು ನೀರು ಬರಬೇಕೋ ಬರುತ್ತಿಲ್ಲ. ಈ ಎಲ್ಲ ದೃಷ್ಟಿಯಿಂದ ಯೋಜನೆಯನ್ನು ಮಾಡಲಾಗಿದ್ದು ಅದಕ್ಕಾಗಿ ೫೦ ಲಕ್ಷ ರೂಪಾಯಿ ಬೇಕಾಗುತ್ತದೆ. ಇವತ್ತು ಅಲ್ಲಿ ೩೧ ಸಾವಿರ ಜನಸಂಖ್ಯೆ ಇದ್ದು ಪರ್‌ಕ್ಯಾಪಿಟಾ ೧೬ ಗ್ಯಾಲನ್ ನೀರು ಕೊಡುತ್ತಿದ್ದೇವೆ. ಅದು ಸಾಕಾಗುತ್ತಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಯೋಜನೆ ತಯಾರು ಮಾಡಿ ೫ ಲಕ್ಷ ರೂಪಾಯಿಯನ್ನು ಜಲಮಂಡಲಿಯವರು ಕೇಳಿದ್ದಾರೆ.

ಶ್ರೀ ಎಂ.ಸಿ. ಬಸಪ್ಪ.—ಜಲಮಂಡಲಿಯವರು ಐದು ಲಕ್ಷ ರೂಪಾಯಿ ಕೇಳಿದ್ದು ಮುನಿಸಿಪಾಲಿಟಿಯವರು ೧ ಲಕ್ಷ ರೂಪಾಯಿ ಡಿಪಾಸಿಟ್ ಮಾಡಿದ್ದಾರೆ. ಉಳಿದಿದ್ದನ್ನು ಮೂರು ಕ್ವಾರ್ಟರೆಲೀ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಡುತ್ತೇವೆ ಎಂದು ನಿರ್ಣಯ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಅದರ ಬಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಧರ್ಮಸಿಂಗ್.—ಈಗಾಗಲೇ ತೊಂದರೆ ಪರಿಹಾರ ಮಾಡುವುದಕ್ಕೋಸ್ಕರ ೭೫ ಸಾವಿರ ರೂಪಾಯಿ ಎಸ್ಟಿಮೇಟ್ ಮಾಡಿ ಯೋಜನೆ ಮಾಡಿದ್ದಾರೆ. ೫೦ ಸಾವಿರ ರೂಪಾಯಿಯನ್ನು ಈಗಾಗಲೇ

ನಗರಸಭೆಯವರು ಕೊಟ್ಟಿದ್ದಾರೆ. ಚಾಮರಾಜನಗರದ ಜನಸಂಖ್ಯೆ ವರ್ಷೇ ವರ್ಷೇ ಬೆಳೆಯುತ್ತಿದೆ. ೭೧ರಲ್ಲಿ ೩೧ ಸಾವಿರ ಜನಸಂಖ್ಯೆ ಇದ್ದರೆ ಈಗ ೪೦ ಸಾವಿರ ಆಗಿದೆ ಮುಂದೆ ೨೦೦೦ ಎ.ಡಿ. ಹೊತ್ತಿಗೆ ಜನಸಂಖ್ಯೆ ಬೆಳವಣಿಗೆಯನ್ನು ಗಮನಿಸಿ ೫೦ ಸಾವಿರ ರೂಪಾಯಿಯನ್ನು ನೀರು ಸರಬರಾಜು ಯೋಜನೆಗೆ ಕೊಟ್ಟಿದೆ. ಆದ್ದರಿಂದ ಅಲ್ಲಿನ ಜನರಿಗೆ ತೊಂದರೆಯಾಗದಂತೆ ಪ್ರಾಮಾಣಿಕವಾದ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ೫೦ ಲಕ್ಷ ರೂಪಾಯಿ ಮೌಲ್ಯದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಮತ್ತು ಮುಂದೆ ಅಲ್ಲಿ ತೊಂದರೆಯಾಗುವುದಿಲ್ಲ ಎಂದೂ ಕೂಡ ನಾವು ಭಾವಿಸಿದ್ದೇವೆ. ೫೦ ಸಾವಿರ ರೂಪಾಯಿಯನ್ನು ನಿನ್ನೆ ಸರ್ಕಾರ ಮಂಜೂರು ಮಾಡಿದೆ.

ಶ್ರೀ ಎಂ. ಸಿ. ಬಸಪ್ಪ.—ನಿನ್ನೆ ೫೦ ಸಾವಿರ ರೂಪಾಯಿ ಮಂಜೂರು ಮಾಡಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಏಪ್ರಿಲ್ ೧ ರಿಂದಲಾದರೂ ಕಾಮಗಾರಿಯನ್ನು ಪ್ರಾರಂಭ ಮಾಡುವ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಧರ್ಮಸಿಂಗ್.—ಈಗಾಗಲೇ ತಮಗೆ ಗೊತ್ತಿರುವಹಾಗೆ ಕೆಲಸ ಪ್ರಾರಂಭವಾಗಿದೆ. ೫೦ ಸಾವಿರ ರೂಪಾಯಿ ನಾನು ಈಗಾಗಲೇ ಹೇಳಿದಂತೆ ಹಣ ಮಂಜೂರಾಗಿದೆ, ಎಲ್.ಐ.ಸಿ. ಯವರು ೧೭ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಆದ್ದರಿಂದ ಯೋಜನೆ ಕೆಲಸವನ್ನು ಇನ್ನು ಎರಡು ವರ್ಷದಲ್ಲಿ ಪೂರ್ಣ ಮಾಡಲಾಗುತ್ತದೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಮಾದಯ್ಯ.—೫ ಲಕ್ಷ ರೂಪಾಯಿಯನ್ನು ನೀರು ಸರಬರಾಜು ಯೋಜನೆಗೆ ಕೊಡಬೇಕೆಂದು ಮುನಿಸಿಪಾಲಿಟಿಯವರನ್ನು ಕೇಳಿದ್ದಾರೆ. ಅಲ್ಲಿನ ಮುನಿಸಿಪಾಲಿಟಿಗೆ ಏನೂ ಸಂಪಾದನೆ ಇಲ್ಲ. ಸಿಬ್ಬಂದಿಯವರಿಗೆ ಸಂಬಳ ಕೊಡುವುದಕ್ಕೇ ಹಣ ಇಲ್ಲ. ಆದ್ದರಿಂದ ಸರ್ಕಾರದವರೇ ಆ ಹಣವನ್ನು ಕೊಟ್ಟು ನಂತರ ಕಂತುಗಳಲ್ಲಿ ಮುನಿಸಿಪಾಲಿಟಿಯಿಂದ ವಸೂಲು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಧರ್ಮಸಿಂಗ್.—ಎಸ್ಟಿಮೇಟ್ ಮಾಡಿದ ಪ್ರಕಾರ ಹಣ ಕೇಳಿದ್ದರು. ಅವರು ಕಟ್ಟಲಿಲ್ಲ. ಇದರಿಂದ ಏನು ತೊಂದರೆಯಾಗಿದೆ ಅದರ ಕಡೆ ಸರ್ಕಾರ ಗಮನ ಕೊಡುತ್ತಿದೆ. ಎಲ್ಲೆಲ್ಲಿ ನಗರಸಭೆಗಳಿಗೆ ಈ ರೀತಿ ತೊಂದರೆಯಾಗುತ್ತಿದೆಯೋ ಅಲ್ಲೆಲ್ಲಾ ಡೆವಲಪ್ಮೆಂಟ್ ಗ್ರಾಂಟ್ ಎಂದು ಪರಿಹಾರ ಧನ ಕೊಡುತ್ತಿದ್ದೇವೆ. ಆದರ ಬಗ್ಗೆ ಮಾನ್ಯ ಸದಸ್ಯರು ಯೋಚನೆ ಮಾಡಬೇಕಾಗಿಲ್ಲ.

ಶ್ರೀ ಎಂ. ಸಿ. ಬಸಪ್ಪ.—೫ ಲಕ್ಷ ರೂಪಾಯಿ ಪೈಕಿ ೧ ಲಕ್ಷ ರೂಪಾಯಿಯನ್ನು ಈಗಾಗಲೇ ಮುನಿಸಿಪಾಲಿಟಿಯವರು ಕೊಟ್ಟಿದ್ದಾರೆ. ಇನ್ನು ೪ ಲಕ್ಷ ರೂಪಾಯಿಯನ್ನು ೩-೪ ತಿಂಗಳಲ್ಲಿ ಕ್ವಾರ್ಟರ್‌ಲೀ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಕೊಡುತ್ತೇವೆ ಎಂಬ ನಿರ್ಣಯ ಮಾಡಿ ಕಳಿಸಿದ್ದಾರೆ: ಆದ್ದರಿಂದ ದಯವಿಟ್ಟು ಸರ್ಕಾರದವರು ಅರ್ಬನ್ ವಾಟರ್‌ಸಪ್ಲೈ ಬೋರ್ಡಿಗೆ ಆದೇಶ ಕೊಟ್ಟು ೧೯೮೦ ರಿಂದ ಕೆಲಸ ತೆಗದುಕೊಳ್ಳುವ ಹಾಗೆ ನಿರ್ದೇಶನ ಕೊಡುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಹೇಳಿದಂತೆ ಮುನಿಸಿಪಾಲಿಟಿಯವರು ನಿರ್ಣಯ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಈಗಾಗಲೇ ನಾನು ಆ ಬಗ್ಗೆ ಅಧಿಕಾರಿಗಳ ಹತ್ತಿರ ಮಾತನಾಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ತಕ್ಷಣ ಈ ಕೆಲಸ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ.

Affiliation of College

259 SRI M. SRINIVAS (Sriraugapatna).—Will the Minister for Education be pleased to state :—

(a) the number of Colleges the Government has given affiliation as against the recommendation of the Mysore University during the years 1976-77 and 1977-78.

(b) why the government has given affiliation ?